ಹಿರೇಕೇರೂರು ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಪಾಲಿಕ್ಲಿನಿಕ್ ಆಸ್ಪತ್ರೆ ಪ್ರಾರಂಭಿಸುವುದು

278 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಮಿಶ್ರತಳಿ ಹಸುಗಳ ಸಂಖ್ಯೆ ಎಷ್ಟು? ಹಾಗೂ ಪ್ರತಿದಿನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣವೆಷ್ಟು?

ಆ) ಗ್ರಾಮೀಣ ಪಶುಗಳ ಸಂಖ್ಯೆಗೆ ಅನುಗುಣವಾಗಿ ಹಿರೇಕೆರೂರಿಗೆ ಪಾಲಿಕ್ಲಿನಿಕ್ ಪಶು ವೈದ್ಯಕೀಯ ಆಸ್ಪತ್ರೆಯ ಅವಶ್ಯಕತೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಹಾಗಿದ್ದಲ್ಲಿ ಹಿರೇಕೆರೂರು ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಪಾಲಿಕ್ಲಿನಿಕ್ ಪಶು ವೈದ್ಯಕೀಯ ಆಸ್ಪತ್ರೆಯನ್ನು ಯಾವಾಗ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಮಿಶ್ರತಳಿ ಹಸುಗಳ ಸಂಖ್ಯೆ 1595 ಪ್ರತಿ ದಿನ ಉತ್ಪಾದನೆ ಆಗುವ ಹಾಲು 17555 ಕೆ.ಜಿ.

ಆ) ಹೌದು

ಇ) ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ 1590 ಮಿಶ್ರತಳಿ ಹಸುಗಳು ಇವೆ ಎಂದು ಒಪ್ಪಿದ್ದಾರೆ. ಹಾಗೂ 17,555 ಲೀಟರ್ ಹಾಲು ಉತ್ಪಾದನೆ ಇದೆ ಎಂದು ಒಪ್ಪಿದ್ದಾರೆ. ಮತ್ತೇ ಅಲ್ಲಿ ಪಾಲಿಕ್ಲಿನಿಕ್ ಅವಶ್ಯಕತೆ ಇದೆ ಎಂದೂ ಒಪ್ಪಿದ್ದಾರೆ. ಆದರೆ ಪಾಲಿಕ್ಲಿನಿಕ್ ಮಂಜೂರು ಮಾಡಿ ಎಂದರೆ ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ. ಈ ವರ್ಷ ಸರ್ಕಾರ ಈಗಾಗಲೇ ಕೊಡುವುದಕ್ಕೆ ಅನುಮತಿ ಇದೆ. 20 ಪಾಲಿಕ್ಲಿನಿಕ್ ಕೊಡುವುದಕ್ಕೆ ಇದೆ. ಅವಶ್ಯಕತೆ ಇದ್ದು ಇಷ್ಟೊಂದು ಹಸುಗಳು ಇವೆ ಎಂದಮೇಲೆ ಹಾಲು ಹೆಚ್ಚು ಪ್ರಮಾಣದಲ್ಲಿ ಇದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಇವೆ. ದಯವಿಟ್ಟು ತಮ್ಮ ಮೂಲಕ ಸಚಿವರಿಗೆ ಕೇಳುತ್ತೇನೆ. ಈ ವರ್ಷವೇ 93-94 ರಲ್ಲೇ ಹಿರೇಕೂರಿಗೆ ಆದ್ಯತೆಯ ಮೇಲೆ ಅಲ್ಲಿ ಒಂದು ಪಾಲಿಕ್ಲಿನಿಕ್ ಅವಶ್ಯಕತೆ ಇರುವುದರಿಂದ ಅಲ್ಲಿಗೆ ಕೊಡಬೇಕು ಎಂದು ನಂತರ ಮನುಷ್ಯರನ್ನು ನಾವು ಎಲ್ಲಿಗೆ ಬೇಕಾದರೂ ಸಹ ತೆಗೆದುಕೊಂಡು ಹೋಗಬಹುದು. ಆದರೆ ದನಗಳನ್ನು ನೋಡಲಿಕ್ಕೆ ಇಡೀ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದೊಂದು ಪಾಲಿಕ್ಲಿನಿಕ್ ಮಾಡತಕ್ಕಂತಹ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡು ಇದನ್ನು ಮಾಡುವುದಕ್ಕೆ ವಿಚಾರ ಮಾಡಿದ್ದೀರಾ? ಎಷ್ಟು ವರ್ಷದಲ್ಲಿ ತಾವು ಮಾಡುತ್ತೀರಿ? ಇದರ ವಿವರವನ್ನು ಅವರ ಮೂಲಕ ನಾನು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ಸಾರಿ 93-94ರಲ್ಲಿ 20 ಪಾಲಿಕ್ಲಿನಿಕ್ಗಳನ್ನು ಪ್ರಾರಂಭ ಮಾಡಿ ಐ ಆರ್ ಡಿಪಿನಲ್ಲಿ ಸುಮಾರು 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಮತ್ತು ಜಿಲ್ಲಾ ಪರಿಷತ್‌ನಿಂದ ಒಂದೊಂದು ಪಾಲಿಕ್ಲಿನಿಕ್‌ಗಳಿಗೆ 2 ಲಕ್ಷದಿಂದ 30 ಲಕ್ಷದವರೆಗೆ ಅಂದಾಜು ಮಾಡಿ ಕೆಲಸ ಪ್ರಾರಂಭ ಮಾಡಿದ್ದೇವೆ ತಾವು ಹೇಳಿದ ರೀತಿ ಕರ್ನಾಟಕ ರಾಜ್ಯದಲ್ಲಿ 6 ಲಕ್ಷ ಮಿಶ್ರ ತಳಿಗಳು ಇದ್ದಾವೆ. ಪ್ರತಿ ತಾಲ್ಲೂಕಿಗೂ ಪಾಲಿಕ್ಲಿನಿಕ್‌ನ ಅವಶ್ಯಕತೆ ಇದೆ. ಅದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ, 5 ವರ್ಷಗಳಲ್ಲಿ ಎಲ್ಲಾ ಕ್ಷೇತ್ರದಲ್ಲಿ ಎಂದರೆ ಎಲ್ಲಾ ಅಸೆಂಬ್ಲಿ ಕ್ಷೇತ್ರದಲ್ಲಿ ಅವಶ್ಯಕತೆ

ಇದೆ ಇದು ಎಂದು ಮನಗಂಡು ಒಂದೊಂದು ಪಾಲಿಕ್ಲಿನಿಕ್‌ಗಳನ್ನು ಮಾಡಬೇಕು. ಎನ್ನುವಂತಹ ಒಂದು ಯೋಜನೆಯನ್ನು ಸಿದ್ಧಮಾಡಿದ್ದೇವೆ. ಒಂದು ಪಾಲಿಕ್ಲಿನಿಕ್‌ಗೆ ಸುಮಾರು 25 ಲಕ್ಷ ರೂಪಾಯಿ ಬೇಕಾಗುತ್ತದೆ. ಆ ದೃಷ್ಟಿಯಿಂದ 5 ವರ್ಷಗಳಲ್ಲಿ ಪ್ರತಿ ಅಸೆಂಬ್ಲಿ ಕ್ಷೇತ್ರಕ್ಕೂ ಒಂದು ಪಾಲಿಕ್ಲಿನಿಕ್ ಎಂದರೆ ವಿವಿಧೋದ್ದೇಶವುಳ್ಳಂತರ ದೊಡ್ಡ ಆಸ್ಪತ್ರೆ ರೀತಿಯಲ್ಲೇ ಈ ಪಶುಗಳ ಆಸ್ಪತ್ರೆಯನ್ನು ಮಾಡಲಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನನ್ನ ತಾಲ್ಲೂಕಿಗೆ ಈ ಸಾರಿ 93-94ರಲ್ಲಿ ನನಗೆ ಒಂದು ಕೊಡರಿ ಎಂದು ತಮಗೆ ಹೇಳಿದ್ದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅವರು ಹೇಳಿದ ರೀತಿಯಲ್ಲಿ ಅಲ್ಲಿ ಅವಶ್ಯಕತೆ ಇದೆ. ಅದನ್ನು 94-95ರ ಏಪ್ರಿಲ್‌ನಿಂದ ಪ್ರಾರಂಭ ಮಾಡುತ್ತೇವೆ. ಆಗ ಖಂಡಿತವಾಗಿಯೂ ಸಹ ಅವರ ಬೇಡಿಕೆಯನ್ನು ಪರಿಶೀಲಿಸಲಾಗುವುದು.

ಸರ್ಕಾರಿ ಔಷಧ ಮಳಿಗೆಯಲ್ಲಿ ದರಗುತ್ತಿಗೆ ನಿಯಮಗಳ ಉಲಂಘನೆ

391 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಔಷಧ ಮಳಿಗೆಯ ಮುಖ್ಯ ಮೇಲ್ವಿಚಾರಕರು ಎಲ್ಲಾ ಔಷಧಿ ಮತ್ತು ಇತರೆ ವಸ್ತುಗಳನ್ನು ಪರಿಶೀಲಿಸಿ ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸಿಲ್ಲದಿದ್ದಲ್ಲಿ ಕಾರಣವೇನು? ಹಾಗೂ ಆದಕ್ಕೆ ಜವಾಬ್ದಾರರು ಯಾರು?

ಇ) ಆದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟವೆಷ್ಟು? ಈ ನಷ್ಟವಾಗಿರುವ ಹಣವನ್ನು ಆವರಿಂದ ವಸೂಲಿ ಮಾಡಲಾಗುವುದೇ? ಹಾಗೂ ಅವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರಿ ಔಷಧಿ ಮಳಿಗೆಯ ಮುಖ್ಯ ಮೇಲ್ವಿಚಾರಕರು ಔಷಧಿ ಮತ್ತಿತರ ಎಲ್ಲಾ ವಸ್ತುಗಳನ್ನು ದರಗುತ್ತಿಗೆಯ ನಿಯಮಗಳಿಗನುಗುಣವಾಗಿಯೇ ಸ್ವೀಕರಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ನಾನು ತಮ್ಮನ್ನು ಒಂದು ಕ್ಲಾರಿಫಿಕೇಷನ್ ಕೇಳಿ ಅನಂತರ ಪ್ರಶ್ನೆಯನ್ನು ಕೇಳುತ್ತೇನೆ. ತಾವೂ ಕೂಡ ಸಂಪ್ರದಾಯವಾದಿಗಳು ಎಂದು ನನ್ನ ನಂಬಿಕೆ. ಒಂದು ಸಾರಿ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಯೀಲ್ಡ್ ಆದರೆ, ನಮಗೆ ಮಾತನಾಡತಕ್ಕ ಅವಕಾಶ ಇದೆಯೋ ಇಲ್ಲವೋ ತಾವೇ ಹೇಳಿ.

ಅಧ್ಯಕ್ಷರು : ತಾವು ಮೊದಲು ಪ್ರಶ್ನೆ ಕೇಳಿ. ಅನಂತರ ತಾವು ನನ್ನ ಚೇಂಬರ್‌ಗೆ ಬಂದು ಮಾತಾನಾಡಿ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಅದು ಆಗುವುದಿಲ್ಲ. ನಾನು ಪ್ರತಿಭಟನೆ ಮಾಡುತ್ತೇನೆ.

(ಗೊಂದಲ)

ಮಂತ್ರಿಗಳು ಯೀಲ್ಡ್ ಆದರು. ಮಂತ್ರಿಗಳಿಗೆ ಪ್ರಚೋದನೆ ಮಾಡಿ ನೀವು ಮಾತನಾಡಿರಿ ಎಂದು ಅವರಿಗೆ ಹೇಳಿದಿರಿ. ಅವರು ಯೀಲ್ಡ್ ಆದರೂ ನನಗೆ